# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ

**ಬೈರಸಂದ್ರ , ವಾರ್ಡ ಸಂಖ್ಯೆ: 169**

**ದಿನಾಂಕ:01.07.2022 ರಂದು ವಾರ್ಡ ಸಂಖ್ಯೆ 169 ಬೈರಸಂದ್ರ ವಾರ್ಡನಲ್ಲಿ ನಡೆದ ವಾರ್ಡ ಸಮಿತಿ ಸಭೆ:**

**-: ಸಮಿತಿ ಸಭೆಯ ನಡವಳಿಗಳು :-**

ವಾರ್ಡ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ ಸಮಿತಿ ಸದಸ್ಯರು:-

| ಕ್ರಮ ಸಂಖ್ಯೆ | ಹೆಸರು | ಹುದ್ದೆ |
|---|---|---|
| 01 | ಶ್ರೀ ವಾಲು ರಾಥೋಡ್ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 02 | ಶ್ರೀ ಚಂದ್ರಶೇಖರ್ ವಿ | ಕಾರ್ಯಾದರ್ಶಿ ಮತ್ತು ಸಂಚಾಲಕರು |
| 03 | ಎನ್. ನಾಗರಾಜು | ಮಾಜಿ ಬಿ.ಬಿ.ಎಂ.ಪಿ ಸದ್ಯಸರು ವಾರ್ಡ-169 |
| 04 | ಶ್ರೀ ಮಂಜುನಾಥ್.ವಿ | ASI, ಸಿದ್ದಾಪುರ ಪೋಲಿಸ್ ಠಾಣೆ |
| 05 | ಶ್ರೀ ರಮೇಶ್ ವಿ ಬಿ | ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 06 | ಶ್ರೀ ನರೇಂದ್ರ ಬಾಬು | ಅರಣ್ಯ ಇಲಾಖೆ (ದಕ್ಷಿಣ) , ಬಿ.ಬಿ.ಎಂ.ಪಿ |
| 07 | ಶ್ರೀಮತಿ ಮಂಜುಳ .ಕೆ.ಸಿ | ತೋಟಗಾರಿಕೆ ಇಲಾಖೆ, (ದಕ್ಷಿಣ), ಬಿ.ಬಿ.ಎಂ.ಪಿ ಜಯನಗರ |
| 08 | ಶ್ರೀಮತಿ ಶ್ರಿಜಾ . ಎಸ್ | ಸ.ಅ, BWSSB ಜಯನಗರ |
| 09 | ಕುಮಾರಿ ಪೊನಂ | ಹಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 10 | ವಾರ್ಡ 169 ರ ಸ್ಥಳಿಯ ನಿವಾಸಿಗಳ ಸಂಘ ಮತ್ತು ಸಾರ್ವಜನಿಕರು | |

ವಾರ್ಡ ಸಮಿತಿ ಅದ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ , ಸಭೆಯನ್ನು ಪ್ರಾರಂಭಿಸಿದರು.

**ಬೈರಸಂದ್ರ ವಾರ್ಡ ಸಂಖ್ಯೆ-196(ಹೂಸದು) ರಲ್ಲಿನ ವಾರ್ಡ ವಿಂಗಡಣೆ (Delimitation) ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಮತ್ತು ವಾರ್ಡ 169 ರ ಸ್ಥಳಿಯ ನಿವಾಸಿಗಳು ಮತ್ತು ಸಂಘದ ಸದಸ್ಯರುಗಳು ತಮ್ಮ ಅಕ್ಷೇಪಣೆಯನ್ನು ವಾರ್ಡ ಸಮಿತಿ ಸಭೆಯಲ್ಲಿ ತಿಳಿಸಿರುತ್ತಾರೆ.**

**ಈ ಕೆಳಕಂಡ ಸಾರ್ವಜನಿಕರು ಮತ್ತು ವಾರ್ಡ 169 ರ ಸ್ಥಳಿಯ ನಿವಾಸಿಗಳ ಸಂಘದ ಸದಸ್ಯರು ತಿಳಿಸಿರುತ್ತಾರೆ.**

1. ಮಂಜುನಾಥ್
2. ಮನೋಹರ್
3. ಫ್ರಾಂಕ್ ಮಾರ್ಕರ್
4. ಶ್ರೀನಾಥ್
5. ಪ್ರೀತಿ
6. ಶಫಿ ಉಲ್ಲಾ
7. ಪರಮೇಶ್ವರ್
8. ಸಂಪತ್
9. ಕಲ್ಲೇಶ್
10. ಮಾಹ್ಮಮದ್
11. ಬಸವರಾಜ್
12. ಲಕ್ಷ್ಮಿ
13. ಸರಸ್ವತಿ
14. ಶಂಕರ್
15. ವಾಸೀಮ್
16. ದೇವಿ
17. ಜಬೀನ್ ತಾಜ್
18. ಇತರೆ ಸಾರ್ವಜನಿಕರು ಮತ್ತು ಸ್ಥಳೀಯ ನಿವಾಸಿಗಳು

1. ಬೈರಸಂದ್ರ ವಾರ್ಡ ಸಂಖ್ಯೆ-196(ಹೊಸದು) ರಲ್ಲಿನ ವಾರ್ಡ ವಿಂಗಡಣೆ (Delimitation) ಯಲ್ಲಿ ಮುಖ್ಯವಾಗಿ, ಬೈರಸಂದ್ರ, LIC ಕಾಲೋನಿ ಮತ್ತು ತಿಲಕ್‌ನಗರದಲ್ಲಿರುವ ನಾಗರೀಕರಿಗೆ ತುಂಬಾ ಅನಾನುಕೂಲವಾಗುವಂತೆ ವಿಂಗಡಣೆ ಮಾಡಿರುತ್ತಾರೆ.

2. ಬೈರಸಂದ್ರ ವಾರ್ಡನ ಗ್ರಾಮ ಮತ್ತು LIC ಕಾಲೋನಿಯನ್ನು ಎರಡು ಭಾಗವನ್ನಾಗಿ ವಿಂಗಡಣೆ ಮಾಡಿ, ತಿಲಕ್ ನಗರ ವಾರ್ಡಗೆ ಸೇರ್ಪಡೆ ಮಾಡಿ ಇರುವುದರಿಂದ ನಮ್ಮ ದಿನನಿತ್ಯ ಸಮಸ್ಯೆಗಳು ಮತ್ತು ವಾರ್ಡನ ಕುಂದು ಕೊರತೆಗಳನ್ನು ತಿಳಿಸಲು ಎರಡು ಕಡೆ ವಾರ್ಡ ಕಛೇರಿಗೆ ಹೋಗಲು ತುಂಬಾ ತೊಂದರೆಯಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

3. ವಾರ್ಡ ವಿಂಗಡಣೆ ಸಮಯದಲ್ಲಿ ಸಣ್ಣ ರಸ್ತೆಗಳಿಂದ ವಿಭಾಗ ಮಾಡಿದ್ದು ಇದರಿಂದ ಕಸದ ಸಮಸ್ಯೆ ಮತ್ತು ಇತರೆ ನಾಗರಿಕ ಸಮಸ್ಯೆಗಳನ್ನು ತಿಳಿಸಲು ತೊಂದರೆಯಾಗುತ್ತದೆ. 8ನೇ ಮುಖ್ಯರಸ್ತೆಯಿಂದ ಚೌಕ ಆಕಾರದಲ್ಲಿ ವಿಂಗಡಣೆ ಮಾಡದೆ, ಅಡ್ಡರಸ್ತೆ ಮೂಲಕ ವಿಂಗಡಣೆ ಮಾಡಿರುವುದರಿಂದ ಅಲ್ಪಸಂಖ್ಯಾತರನ್ನು ವಾರ್ಡನಿಂದ ಪ್ರತ್ಯೇಕಗೊಳಿಸಿದಂತಾಗುತ್ತದೆ ಹಾಗೂ ಇದು ಉದ್ದೇಶ ಪೂರ್ವಕವಾಗಿರುತ್ತದೆ. ಅದ್ದರಿಂದ ವಾರ್ಡ ವಿಂಗಡಣೆಯನ್ನು ವೈಜ್ಞಾನಿಕ ವಾಗಿ ಮಾಡಬೇಕೆಂದು ಸಾರ್ವಜನಿಕರು ಸಭೆಯಲ್ಲಿ ಕೋರಿರುತ್ತಾರೆ.

4. ಚುನಾವಣೆ ಸಮಯದಲ್ಲಿ ಸಾರ್ವಜನಿಕರಿಗೆ ಹಾಗೂ ಹಿರಿಯ ನಾಗರೀಕರಿಗೆ ಈ ಹಿಂದೆ ಇದ್ದ ಐಸಿಅ ಕಾಲೋನಿಯ ವಾರ್ಡ ಕಛೇರಿಯ ಮತಗಟ್ಟೆಗೆ ಹೋಗಿ ಮತ ಚಲಾಯಿಸಿತ್ತಿದ್ದರು, ಅದರೆ ಈಗ ಐಸಿಅ ಕಾಲೋನಿಯ 2ನೇ ಅಡ್ಡರಸ್ತೆಯನ್ನೇ ವಿಭಜಿಸಿರುವುದರಿಂದ ಎರಡು ಮನೆಗಳ, ಮನೆಯರಿಗೆ ಎದುರುಗಡೆ ಇರುವ ಮತಗಟ್ಟೆಯನ್ನು ಬಿಟ್ಟು, ಚುನಾವಣಾ ಸಂದರ್ಭದಲ್ಲಿ ಮತ ಚಲಾಯಿಸಲು ಪಕ್ಕದ ವಾರ್ಡಗೆ ಹೋಗಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ. ಇದರಿಂದ ಈ ರಸ್ತೆಯ ಹಿರಿಯ ನಾಗರೀಕರಿಗೆ ಮತ್ತು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತದೆ.

5. ಚುನಾವಣೆ ಸಮಯದಲ್ಲಿ ಹಿರಿಯ ನಾಗರೀಕರಿಗೆ ಮತಗಟ್ಟಿಗೆ ಹೋಗಲು ದೂರವಾಗುತ್ತದೆ. ಇದರಿಂದ ಹಿರಿಯ ನಾಗರೀಕರಿಗೆ ತುಂಬಾ ಅನಾನುಕೂಲವಾಗುತ್ತದೆ ಮತ್ತು ಈ ಹಿಂದೆ ವಾರ್ಡನ ಬೌಂಡರಿಯ ವ್ಯಾಪ್ತಿಗೆ ಸೇರಿಸಲು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

6. ಬೈರಸಂದ್ರ ವಾರ್ಡಗೆ ಮೊದಲು ಇದ್ದ ಬೈರಸಂದ್ರ ಗ್ರಾಮ, LIC ಕಾಲೋನಿ ಮತ್ತು ತಿಲಕ್‌ನಗರವನ್ನು ಹೊಸದಾಗಿ ನಿರ್ಮಾಣಗೊಂಡಿರುವ ಬೈರಸಂದ್ರ ವಾರ್ಡ ಸಂಖ್ಯೆ-196 ಗೆ ಸೇರ್ಪಡೆ ಮಾಡಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.

**ಕ್ರಮ:- ವಾರ್ಡ -169 ರ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸರ್ಕಾರ ಈಗಾಗಲೇ ಬಿ.ಬಿ.ಎಂ.ಪಿ ವಾಡಗಳ ವಿಂಗಡಣೆಯನ್ನು ಹಾಲಿ ಇರುವ 198 ವಾರ್ಡಗಳನ್ನು 243 ಕ್ಕೆ ಹೆಚ್ಚಿಸಿ ಸರ್ಕಾರವು ಕರಡು ಪ್ರತಿಯನ್ನು ಪ್ರಕಟಿಸಿದ್ದು, ವಾರ್ಡಗಳ ವಿಂಗಡಣಾ ಬಗ್ಗೆ ಯಾವುದೇ ಅಕ್ಷೇಪಣೆ ಹಾಗೂ ಸಲಹೆಗಳನ್ನು ಇದ್ದಲ್ಲಿ ಖುದ್ದಾಗಿ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ ಇಲ್ಲಿಗೆ ಸಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಿರುತ್ತಾರೆ ಅದರಂತೆ ನೀವುಗಳು ಅಕ್ಷೇಪಣೆಯನ್ನು ಸಲ್ಲಸಬಹುದಾಗಿರುತ್ತದೆ ಎಂದು ಸಭೆಯಲ್ಲಿ ನೋಡಲ್ ಅಧಿಕಾರಿಯವರು ತಿಳಿಸಿರುತ್ತಾರೆ.**

7. ವಾರ್ಡ್ ಸಂಖ್ಯೆ 169 ನಲ್ಲಿರುವ LIC ಕಾಲೋನಿಯ ಅಡ್ಡರಸ್ತೆ ಮತ್ತು ಮುಖ್ಯರಸ್ತೆಗಳಲ್ಲಿ ಅನೇಕ ಮ್ಯಾನ್‌ಹೋಲ್ (Manhole) ಗಳಲ್ಲಿ ಹೊಳು ತುಂಬಿಕೊಂಡಿದ್ದು, ಮ್ಯಾನ್‌ಹೋಲ್‌ಗಳಲ್ಲಿರುವ ಹೂಳುನ್ನು ತೆಗೆಯಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ. BWSSB, ಜಯನಗರ)**

8. ವಾರ್ಡ್ ಸಂಖ್ಯೆ 169 ರಲ್ಲಿರುವ 10ನೇ ಅಡ್ಡರಸ್ತೆಯಲ್ಲಿ Shoulder drain ಮಾಡಿದ್ದು, ಆದರೆ Shoulder drain ಗಳಿಗೆ Steel Grating ಅಳವಡಿಸಿರುದಿಲ್ಲ. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ. SWD(South), BBMP)**

9. ವಾರ್ಡ್ ಸಂಖ್ಯೆ 169 ನಲ್ಲಿರುವ LIC ಕಾಲೋನಿಯಲ್ಲಿರುವ ಕೆಲವು ಮನೆಯವರು ರಾತ್ರಿ ವೇಳೆಯಲ್ಲಿ ಹಸಿ ಕಸದ ಬ್ಯಾಗ್ ಅನ್ನು ಮನೆಯಿಂದ ಹೊರಗಡೆ ಇಡುತ್ತಿದ್ದು, ಅಲ್ಲಿರುವ ಬೀದಿ ನಾಯಿಗಳು ಆ ಹಸಿ ಕಸದ ಬ್ಯಾಗ್ ಅನ್ನು ಹರಿದು ಹಾಕಿ ಹಸಿ ಕಸವನ್ನು ಅಲ್ಲಿ ಅಲ್ಲಿ ಬಿಸಾಡುತ್ತಿರುತ್ತವೆ. ಅದ್ದರಿಂದ ಕಾಲೋನಿ ನಿವಾಸಿಗಳಿಗೆ ಇದರ ಬಗ್ಗೆ ತಿಳಿಸಿ ಹೇಳಿ ಮತ್ತು ಜಾಗೃತಿ ಅಭಿಯಾನ ಕೈಗೊಳ್ಳಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ. SWM, ಜಯನಗರ)**

**ನಿರ್ಣಯ:** ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ವಾಲು ರಾಥೋಡ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ ಸಭೆ
ವಾರ್ಡ್–169, ಬೈರಸಂದ್ರ